## ಪ್ರಾರ್ಥನೆ

# ಕಲ್ಯಾಣವೃಷ್ಟಿಸ್ತವಃ - ೩


**ಸರ್ವಜ್ಞತಾಂ ಸದಸಿ ವಾಕ್ಪಟುತಾಂ ಪ್ರಸೂತೇ**
**ದೇವಿ ತ್ವದಂಘ್ರಿಸರಸೀರುಹಯೋಃ ಪ್ರಣಾಮಃ ।**
**ಕಿಂ ಚ ಸ್ಫುರನ್ಮುಕುಟಮುಜ್ಜ್ವಲಮಾತಪತ್ರಂ**
**ದ್ವೇ ಚಾಮರೇ ಚ ಮಹತೀಂ ವಸುಧಾಂ ದದಾತಿ ॥ ೭ ॥**

ದೇವಿ, ನಿನ್ನ ಪಾದಾರವಿಂದಗಳಿಗೆ ಅರ್ಪಿಸಿದ ನಮಸ್ಕಾರವು ಸರ್ವಜ್ಞತೆಯನ್ನೂ, ವಿದ್ವತ್ ಸಭೆಯಲ್ಲಿ ಚತುರತೆಯನ್ನೂ ತಂದು ಕೊಡುತ್ತದೆ. ನಿನಗೆ ಅರ್ಪಿಸಿದ ಹೊಳೆಯುವ ಕಿರೀಟ, ಪ್ರಕಾಶ ಮಾನವಾದ ಬೆಳ್ಗೊಡೆ ಮತ್ತು ಚಾಮರಗಳ ಸೇವೆ ಸಮಸ್ತ ಭೂ ಮಂಡಲದ ಒಡೆತನವನ್ನೇ ನೀಡುವುದು.

**ಕಲ್ಪದ್ರುಮೈರಭಿಮತಪ್ರತಿಪಾದನೇಷು**
**ಕಾರುಣ್ಯವಾರಿಧಿರಂಬ ಭವತ್ಕಟಾಕ್ಷೈಃ ।**
**ಆಲೋಕ್ಯ ತ್ರಿಪುರಸುಂದರಿ ಮಾಮನಾಥಂ**
**ತ್ವಯ್ಯೇವ ಭಕ್ತಿಭರಿತಂ ತ್ವಯಿ ಬದ್ಧತೃಷ್ಣಮ್ ॥ ೮ ॥**

ಅಮ್ಮಾ, ನಿನ್ನ ಕರುಣಾರಸದಿಂದ ತುಂಬಿದ ಕಟಾಕ್ಷಗಳು ಕಲ್ಪ ವೃಕ್ಷಗಳಂತೆ. ಅವು ಬಯಸಿದುದನ್ನು ಕರುಣಿಸುವುವು. ಹೇ ತ್ರಿಪುರಸುಂದರಿ, ನಿನ್ನಲ್ಲೇ ನೆಲೆಸಿರುವ, ಎಲ್ಲ ಆಸೆಗಳನ್ನೂ ನಿನ್ನಲ್ಲೇ ಸಮರ್ಪಿಸಿರುವ, ನಿನ್ನಲ್ಲೇ ಪೂರ್ಣ ಭಕ್ತಿಯನ್ನು ಹೊಂದಿರುವ, ಅನಾಥನಾದ ನನ್ನನ್ನು ಕರುಣೆಯಿಂದ ನೋಡು.

**ಹಂತೇತರೇಷ್ವಪಿ ಮನಾಂಸಿ ನಿಧಾಯ ಚಾನ್ಯೇ**
**ಭಕ್ತಿಂ ವಹಂತಿ ಕಿಲ ಪಾಮರದೈವತೇಷು ।**
**ತ್ವಾಮೇವ ದೇವಿ ಮನಸಾ ಸಮನುಸ್ಮರಾಮಿ**
**ತ್ವಾಮೇವ ನೌಮಿ ಶರಣಂ ಜನನಿ ತ್ವಮೇವ ॥ ೯ ॥**



ಕೆಲವರು ಇತರ ಸಾಮಾನ್ಯ ದೇವತೆಗಳಲ್ಲಿ ಮನಸ್ಸನ್ನೂ ಭಕ್ತಿಯನ್ನೂ ಇಟ್ಟಿರುತ್ತಾರೆ. ಅಮ್ಮಾ, ನಾನಾದರೋ ನನ್ನ ಮನಸ್ಸಿನಿಂದ ನಿನ್ನನ್ನೇ ಸ್ಮರಿಸುತ್ತೇನೆ, ನಿನ್ನನ್ನೇ ನಮಸ್ಕರಿಸುತ್ತೇನೆ.

— ಶ್ರೀಶಂಕರಾಚಾರ್ಯ

## ಸೂಕ್ತಿಪ್ರಭ

ಪುಸ್ತಕದ ಕಡೆಗೆ ಒಂದೇ ಒಂದು ನೋಟ ಸಾಕು; ನೀನು ಇನ್ನೊಬ್ಬ ವ್ಯಕ್ತಿಯ ಧ್ವನಿಯನ್ನು ಆಲಿಸುವೆ. ಬಹುಶಃ ಅವನು ೧೦೦೦ ವರ್ಷಗಳ ಹಿಂದೆಯೇ ಸತ್ತಿದ್ದಿರಬಹುದು. ಓದು ಎಂದರೆ ಕಾಲಪ್ರವಾಹದಲ್ಲಿ ಮಾಡುವ ಪಯಣ.

— ಕಾರ್ಲ್ ಸಗಾನ್

ಶಿಸ್ತುಬದ್ಧತೆ ಎಂಬುದೇ ಅಡಿಪಾಯ. ಅದರ ಮೇಲೆ ಎಲ್ಲ ಯಶಸ್ಸುಗಳೂ ನಿರ್ಮಾಣಗೊಳ್ಳುತ್ತವೆ. ಶಿಸ್ತುಬದ್ಧತೆಯಿಲ್ಲದ ಕಾರ್ಯ ಖಂಡಿತ ಸೋಲಿಗೆ ದಾರಿಯಾಗುತ್ತದೆ.

— ಜಿಮ್ ರಾನ್

**ಆಪತ್ಕಾಲೇ ತು ಸಂಪ್ರಾಪ್ತೇ ಶೌಚಾಚಾರಂ ನ ಚಿಂತಯೇತ್ ।**
**ಸ್ವಯಂ ಸಮುದ್ಧರೇತ್ ಪಶ್ಚಾತ್ ಸ್ವಸ್ಥೋ ಧರ್ಮಂ ಸಮಾಚರೇತ್ ॥**

'ಕಷ್ಟಕಾಲ ಬಂದಾಗ ಶೌಚ ಆಚಾರಗಳನ್ನು ಚಿಂತಿಸಬಾರದು. ಮೊದಲು ತನ್ನನ್ನು ತಾನು ಕಾಪಾಡಿಕೊಂಡು ಆಮೇಲೆ ಧರ್ಮಾಚರಣೆ ಮಾಡಬಹುದು.'

—ಪರಾಶರಸ್ಮೃತಿ

ಮನುಷ್ಯ ತನಗೋಸ್ಕರವೇ ಬದುಕಿದರೆ ಸೊಳ್ಳೆ, ತಿಗಣೆಗಳಿಗೂ ಅವನಿಗೂ ವ್ಯತ್ಯಾಸವಿಲ್ಲ. ದೇಶಕ್ಕೋಸ್ಕರ, ಇತರರಿಗೋಸ್ಕರ ಬದುಕಬೇಕು. — ಮದನ ಮೋಹನ ಮಾಳವೀಯ